**ಉಡುತೊರೆ ಜಲಾಶಯ ಯೋಜನೆ ಕುರಿತು**

732 - ಶ್ರೀ ಜಿ. ರಾಜುಗೌಡ (ಹನೂರು): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಉಡುತೊರೆ ಜಲಾಶಯ ಯಾವಾಗ ಪ್ರಾರಂಭವಾಯಿತು?*

*ಆ) ಈ ಯೋಜನೆ ಯಾವಾಗ ಮುಗಿಯ ಬೇಕಿತ್ತು?*

*ಇ) ಯೋಜನೆ ಪ್ರಾರಂಭದಲ್ಲಿ ಇದರ ವೆಚ್ಚ ಎಷ್ಟು ಎಂದು ಅಂದಾಜು ಮಾಡಲಾಗಿದ್ದಿತು?*

*ಈ) ಇದುವರೆವಿಗೂ ಆಗಿರುವ ವೆಚ್ಚ ಎಷ್ಟು?*

*ಉ) ಆದು ಮುಗಿಯಬೇಕಾದರೆ ಇನ್ನೂ ಎಷ್ಟು ಹಣ ಬೇಕಾಗುವುದು ಮತ್ತು ಯಾವಾಗ ಮುಗಿಸಲಾಗುವುದು?*

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ಜನವರಿ 1990ರಲ್ಲಿ ಪ್ರಾರಂಭವಾಯಿತು

ಆ) 1996 ರಲ್ಲಿ ಮುಗಿಯಬೇಕಾಗಿದೆ.

ಇ) ರೂ. 3230 ಲಕ್ಷಗಳು

ಈ) ರೂ. 3688.39 ಲಕ್ಷಗಳು (ಫೆಬ್ರುವರಿ 1994ರ ಅಂತ್ಯದವರೆವಿಗೆ)

ಉ) ಇಂದಿನ ದರಗಳ ಪ್ರಕಾರ ಪೂರೈಸಲು ಬೇಕಾಗುವ ಬಾಕಿ ಹಣ 21.18 ಕೋಟಿ ರೂ.ಗಳು. ಈ ಯೋಜನೆಯನ್ನು 1997ರಲ್ಲಿ ಪೂರ್ಣಗೊಳಿಸುವ ಉದ್ದೇಶವಿದೆ.

ಶ್ರೀ ಜಿ. ರಾಜುಗೌಡ: ಮಾನ್ಯ ಅಧ್ಯಕ್ಷರೇ, ಈ ಉಡುತೊರೆ ಯೋಜನೆಯು ಸಕಾಲದಲ್ಲಿ ಮುಗಿದಿದ್ದರೆ ಎಷ್ಟು ವೆಚ್ಚವಾಗುತ್ತಿತ್ತು, ಆಗ ಒಂದು ಎಕರೆ ನೀರಾವರಿಗೆ ಎಷ್ಟು ವೆಚ್ಚವಾಗುತ್ತಿತ್ತು, ಈಗ ಎಷ್ಟಾಗಿದೆ ಎಂದು ತಿಳಿಸಬೇಕು, ಹಾಗೂ ಇದು ಪ್ರಾರಂಭವಾಗಿ ಬಹಳ ವರ್ಷಗಳಾಗಿವೆ ಇದನ್ನು ಯಾವಾಗ ಮುಗಿಸುತ್ತೀರಿ. ಮೊದಲಿನ ಅಂದಾಜುವೆಚ್ಚ ಎಷ್ಟು, ಈಗಿನ ಅಂದಾಜುವೆಚ್ಚ ಎಷ್ಟು ಎಂಬುದನ್ನು ದಯಮಾಡಿ ತಿಳಿಸುತ್ತೀರಾ?

ಶ್ರೀ ಎಸ್.ಎಂ. ಕೃಷ್ಣ: ಇದು ವಿಳಂಬವಾಗಿ ನಡೆದಿರತಕ್ಕಂಥಾ ಯೋಜನೆ 1978ರಲ್ಲಿ ಇದಕ್ಕೆ ಆಡಳಿತಾತ್ಮಕ ಮಂಜೂರಾತಿ ನೀಡಲಾಯಿತು. ಸುಮಾರು 36 ಕೋಟಿ ರೂಪಾಯಿಗಳು 1530 ಮೀಟರ್ ಉದ್ದದ ಮಣ್ಣಿನ ಏರಿ ಕೆಲಸವೂ ಪ್ರಗತಿಯಲ್ಲಿದ್ದು ಸ್ಪಿಲ್ವೇ ಮತ್ತು ಸಂಬಂಧಪಟ್ಟ ಕೆಲಸಗಳು ಆಗಬೇಕಾಗಿದೆ. ನಾಲೆ ಕೆಲಸಗಳನ್ನು ಕೂಡ ಪ್ರಾರಂಭಿಸಬೇಕಾಗಿದೆ. ಇದುವರೆಗೂ ಕೂಡ 26 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇನೆ. ಇದನ್ನು ಸಂಪೂರ್ಣಗೊಳಿಸಬೇಕಾಗಿದ್ದರೆ ಸುಮಾರು ಇನ್ನೂ 21 ಕೋಟಿ ರೂಪಾಯಿಗಳು ಬೇಕಾಗುತ್ತದೆ. ನಮ್ಮ ಅಂದಾಜಿನ ಪ್ರಕಾರ 1997ನೇ ಇಸವಿಯಲ್ಲಿ ಇದನ್ನು ಪೂರ್ಣಗೊಳಿಸಬಹುದು ಎನ್ನತಕ್ಕಂಥ ಮಹತ್ವಾಕಾಂಕ್ಷೆ ಇದೆ.

ಶ್ರೀ ಜಿ. ರಾಜುಗೌಡ: ಮಾನ್ಯ ಅಧ್ಯಕ್ಷರೇ ಈ ಯೋಜನೆ ಪ್ರಾರಂಭವಾಗಿದ್ದು 1978ರಲ್ಲಿ ತಾವು ತಮ್ಮ ಮೊದಲನೆ ಯೋಜನೆಯ ವರದಿ ಪ್ರಕಾರ ಇದನ್ನು 5 ವರ್ಷಗಳಲ್ಲಿ ಮುಗಿಸಬೇಕು ಎನ್ನತಕ್ಕಂಥಾದ್ದು ಇತ್ತು. ಇದು ಪ್ರಾರಂಭವಾಗಿ ಸುಮಾರು 15 ವರ್ಷಗಳು ಆಗಿದೆ. ಆವಾಗ ಬೇಕಾಗಿದ್ದು ಸುಮಾರು 15 ಕೋಟಿ ಈಗ 100 ಕೋಟಿ ರೂಪಾಯಿಗಳವರೆಗೆ ಆಗುತ್ತದೆಂದು ತಾವು ಹೇಳುತ್ತೀರಿ. ಜೊತೆಗೆ ಯಾವಾಗ ರೈತನಿಗೆ ನೀರು ಕೊಡುತ್ತೀರಿ ಎನ್ನತಕ್ಕಂಥಾದ್ದು. ತಾವು ಇನ್ನೂ ಕಾಲುವೆ ಕೆಲಸವೇ

ಪ್ರಾರಂಭ ಮಾಡಿಲ್ಲ. ಬಹಳ ಡಿಲೇ ಆಗುತ್ತಿದೆ. ಬಹುಶಃ ಈ ಯೋಜನೆ ಬಿಟ್ಟರೆ ಬೇರೆ ಯಾವ ಯೋಜನೆಯೂ ಆ ತಾಲ್ಲೂಕಿನಲ್ಲಿ ಇಲ್ಲ. ಈ ಯೋಜನೆಯನ್ನು ಸಕಾಲದಲ್ಲಿ ಮುಗಿಸಿದ್ದರೆ ಒಂದು ಎಕರೆಗೆ ನೀರಾವರಿ ಮಾಡುವುದಕ್ಕೆ ಎಷ್ಟು ಖರ್ಚು ಆಗುತ್ತಿತ್ತೋ ಈಗ ಅದರ ಪ್ರಮಾಣ ಎಷ್ಟು ಆಗಿದೆ ಎನ್ನುವುದನ್ನು ದಯಮಾಡಿ ತಿಳಿಸಿ.

ಶ್ರೀ ಎಸ್.ಎಂ. ಕೃಷ್ಣ: ಮಾನ್ಯ ಅಧ್ಯಕ್ಷರೇ, 5 ವರ್ಷಗಳ ಅವಧಿಯಲ್ಲಿ ಈ ಯೋಜನೆಯನ್ನು ಪೂರೈಸಿದರೆ ನಾವು ಇನ್ನೂ ಇಷ್ಟು ಪ್ರಮಾಣದಲ್ಲಿ ಹಣವನ್ನು ಖರ್ಚು ಮಾಡಬೇಕಾಗಿರಲಿಲ್ಲ. ಆದರೆ ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ನಾವು ವ್ಯಾಪಕವಾದಂತಹ ನೀರಾವರಿ ಕಾಮಗಾರಿಗಳನ್ನು ಇಡೀ ರಾಜ್ಯದಲ್ಲಿ ಕೈಗೆ ತೆಗೆದುಕೊಂಡಿರುವುದರಿಂದ ಸಂಪನ್ಮೂಲಗಳನ್ನು ಯಾವ ಪ್ರಮಾಣದಲ್ಲಿ ಯಾವ ಯೋಜನೆಗೆ ಕೊಡಬೇಕು ಎನ್ನುವುದರ ಬಗ್ಗೆ ನಮ್ಮ ಕೈಗಳು ಕಟ್ಟಿರುವುದರಿಂದ ಈ ಯೋಜನೆಯು ಮಂದಗತಿಯಲ್ಲಿ ನಡೆಯುತ್ತಿದೆ. ಹೋದ ವರ್ಷದ ಹಣಕಾಸಿನ ವರ್ಷದಲ್ಲಿ 18 ಕೋಟಿಯನ್ನು ಇದಕ್ಕೆ ನಿಗದಿ ಮಾಡಿದ್ದು 8 ಕೋಟಿಯನ್ನು ಮಾತ್ರ ಜನವರಿಯವರೆಗೆ ಖರ್ಚು ಮಾಡಲಾಗಿದೆ. 94-95ನೇ ಇಸವಿಯ ಬಜೆಟ್ನಲ್ಲಿ ಕೂಡ ಸುಮಾರು ಹದಿನೆಂಟುವರೆ ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಈ ವಿಚಾರದಲ್ಲಿ ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಅರ್ಥಮಾಡಿಕೊಂಡಿದ್ದೇನೆ.

**ರಸ್ತೆ ಹಾಗೂ ಕಟ್ಟಡಗಳ ಮೇಲಣ ವೆಚ್ಚವಾದ ಹಣದ ವಿವರ ಕುರಿತು**

607 - ಶ್ರೀಮತಿ. ಸುಮ ವಸಂತ (ವಿರಾಜಪೇಟೆ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) 1992-93 ಮತ್ತು 1993-94ನೇ ಸಾಲಿನಲ್ಲಿ ಆಯವ್ಯಯದಲ್ಲಿ ಕಟ್ಟಡ ಮತ್ತು ರಸ್ತೆ ಅಭಿವೃದ್ಧಿಗೆ ಕೊಡಗು ಜಿಲ್ಲೆಗೆ ಮಂಜೂರಾದ ಹಣ ಎಷ್ಟು?*

*ಆ) ಅದರಲ್ಲಿ ಎಷ್ಟು ಹಣ ಬಿಡುಗಡೆಯಾಗಿದೆ?*

*ಇ) ಹಣ ಬಿಡುಗಡೆ ಸರಿಯಾಗಿ ಆಗದೆ ಕಾಮಗಾರಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಈ) ಗುತ್ತಿಗೆದಾರರಿಗೆ ಹಣ ಬಿಡುಗಡೆಯಾಗದೆ ಕೆಲಸ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ?*

*ಉ) ಆ ಬಗ್ಗೆ ಸರ್ಕಾರ ಏನು ಕ್ರಮ ಕೈಗೊಂಡಿದೆ?*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದಂತೆ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಸರ್ಕಾರದಿಂದ ಬಿಡುಗಡೆಯಾದ ಹಣ ಭರವಸೆ ಪತ್ರ ಅನುಸರಿಸಿ ಆಯಾ ವಿಭಾಗದ ಅನುದಾನ ಲಭ್ಯತೆಯಂತೆ ಹಂಚಲಾಗಿದೆ.

ಈ) ಕೆಲಸ ಯಾವುದೂ ನಿಂತಿರುವುದಿಲ್ಲ.

ಉ) ಈ ಪ್ರಶ್ನೆ ಉದ್ಭವಿಸುವುದಿಲ್ಲ.